# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ : 619(602)
ಸದಸ್ಯರ ಹೆಸರು : ಡಾ. ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ : 22-07-2024
ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಪದವಿ ಪೂರ್ವ ಕಾಲೇಜುಗಳಿಗೆ ಖಾಯಂ ಪ್ರಾಂಶುಪಾಲರು ಇದ್ದಾರೆ: | ರಾಜ್ಯದಲ್ಲಿ ಒಟ್ಟು 1219 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಖಾಯಂ ಪ್ರಾಂಶುಪಾಲರು ಹುದ್ದೆಯು ಮಂಜೂರಾಗಿದ್ದು, 640 ಪ್ರಾಂಶುಪಾಲರು ಕಾರ್ಯನಿರ್ವಹಿಸುತ್ತಿದ್ದಾರೆ. |
| ಆ) | ಖಾಯಂ ಪ್ರಾಂಶುಪಾಲರಲ್ಲಿ ಬಡ್ತಿ ಮೂಲಕ ಮತ್ತು ನೇರ ನೇಮಕಾತಿ ಮೂಲಕ ನೇಮಕವಾದ ಪ್ರಾಂಶುಪಾಲರ ಸಂಖ್ಯೆ ಎಷ್ಟು; | 640 ಪ್ರಾಂಶುಪಾಲರು ಬಡ್ತಿ ಮೂಲಕ ನೇಮಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.<br>ಯಾವುದೇ ಪ್ರಾಂಶುಪಾಲರು ನೇರ ನೇಮಕಾತಿ ಮೂಲಕ ನೇಮಕವಾಗಿರುವುದಿಲ್ಲ. |
| ಇ) | ಶೇಕಡ 25ರಷ್ಟು ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇಲಾಖೆಯು ನಿಯಮ ರೂಪಿಸಿದೆಯೆ; (ನಿಯಮದ ಪ್ರತಿ ನೀಡುವುದು) | ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 01 ಡಿಜಿಡಿ 2022 ದಿನಾಂಕ:06-06-2024ರಲ್ಲಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪ್ರಾಂಶುಪಾಲರ ಹುದ್ದೆಯ ನೇರ ನೇಮಕಾತಿಗೆ ಸಂಬಂಧಿಸಿದಂತೆ ಪರೀಕ್ಷಾ ಕಾರ್ಯವಿಧಾನದಲ್ಲಿನ ಪಠ್ಯಕ್ರಮವನ್ನು ಪರಿಷ್ಕರಿಸಿ ಮತ್ತು ಕನಿಷ್ಠ 10 ವರ್ಷಗಳ ಉಪನ್ಯಾಸಕರ ಸೇವೆಯ ಮಾನದಂಡವನ್ನು ನಿಗಧಿಪಡಿಸಲು ಅಂತಿಮ ತಿದ್ದುಪಡಿ ನಿಯಮಗಳನ್ನು ಪ್ರಕಟಿಸಲಾಗಿದೆ<br>(ನಿಯಮದ ಪ್ರತಿಯನ್ನು ಅನುಬಂಧದಲ್ಲಿ ಒದಗಿಸಿದೆ). |
| ಈ) | ನೇರ ನೇಮಕಾತಿ ಮೂಲಕ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಇನ್ನು ಪ್ರಕ್ರಿಯೆ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು; ಹಾಗೂ ಯಾವಾಗ ಪ್ರಕ್ರಿಯೆ ಪ್ರಾರಂಭಿಸಲಾಗುತ್ತದೆ? | ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಂಶುಪಾಲರ ನೇರ ನೇಮಕಾತಿ ಕುರಿತಂತೆ ಈಗಾಗಲೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ದಿನಾಂಕ:18-03-2020ರಂದು ಬರೆಯಲಾಗಿದ್ದ ಪತ್ರದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ 216 ಉಳಿಕೆ ಮೂಲ ಪ್ರಾಂಶುಪಾಲರ ವೃಂದದ ಮತ್ತು 39 ಕಲ್ಯಾಣ ಕರ್ನಾಟಕ ರಾಜ್ಯ ವ್ಯಾಪಿ ಸ್ಥಳೀಯ ವೃಂದದ ಹುದ್ದೆಗಳ ನೇರ ನೇಮಕಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.<br>ಆದರೆ ಪ್ರಸ್ತುತ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ |

| | | |
|---|---|---|
| | | ಪ್ರಾಂಶುಪಾಲರ ಹುದ್ದೆಯ ನೇರ ನೇಮಕಾತಿಗೆ ಸಂಬಂಧಿಸಿದಂತೆ ಪರೀಕ್ಷಾ ಕಾರ್ಯವಿಧಾನದಲ್ಲಿನ ಪಠ್ಯಕ್ರಮವನ್ನು ಪರಿಷ್ಕರಿಸಿ ಮತ್ತು ಕನಿಷ್ಠ 10 ವರ್ಷಗಳ ಉಪನ್ಯಾಸಕರ ಸೇವೆಯ ಮಾನದಂಡವನ್ನು ನಿಗಧಿಪಡಿಸಲು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 01 ಡಿಜಿಡಿ 2022 ದಿನಾಂಕ:06-06-2024ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗಿದೆ.<br><br>ಅದರಂತೆ, ಪ್ರಾಂಶುಪಾಲರ ನೇರ ಪ್ರಕ್ರಿಯೆಯನ್ನು ನೇಮಕಾತಿ ಪುನ: ಪ್ರಾರಂಭಿಸಬೇಕಾಗಿರುವುದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 02 ಬಿಇಎಂ 2021 ದಿನಾಂಕ:24-11-2021ರನ್ವಯ ಕಲ್ಯಾಣ ಕರ್ನಾಟಕ ವೃಂದದ 39 ಪ್ರಾಂಶುಪಾಲರ ಹುದ್ದೆಗಳ ಭರ್ತಿಗೆ ಶೇಕಡ 80ರಷ್ಟು ಅಂದರೆ 31 ಹುದ್ದೆಗಳನ್ನು ಮಾತ್ರ ನೇಮಕಾತಿ ಮಾಡಿಕೊಳ್ಳಲು ಅವಕಾಶವಿರುತ್ತದೆ.<br><br>ಆದ್ದರಿಂದ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)ಯ ಪ್ರಾಂಶುಪಾಲರ ವೃಂದದ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ 39 ಹುದ್ದೆಗಳ ಬದಲಾಗಿ 31 ಹುದ್ದೆಗಳಿಗೆ ಮತ್ತು 216 ಉಳಿದ ಮೂಲ ವೃಂದದ ಪ್ರಾಂಶುಪಾಲರ ಹುದ್ದೆಗಳಿಗೆ ಸರ್ಕಾರದ ಅದೇಶ ಸಂಖ್ಯೆ: ಸಿಆಸುಇ 1 ಸೆಹಿಮ 2022 ದಿನಾಂಕ: 28.12.2022 ಮತ್ತು ಸರ್ಕಾರದ ಅದೇಶ ಸಂಖ್ಯೆ:ಸಿಆಸುಇ 02 ಸೆಹಿಮ 2023 ದಿನಾಂಕ:08.03.2023ರಲ್ಲಿ ಪರಿಷ್ಕರಿಸಿರುವ ಮೀಸಲಾತಿ ಬಿಂದುಗಳನ್ವಯ ಮರು ನಿಗದಿಪಡಿಸಿ, ಮೀಸಲಾತಿ ರೋಸ್ಟರ್‌ಗಳ ವಿವರಗಳೊಂದಿಗೆ ನಮೂನೆ-6ರಲ್ಲಿ ಭರ್ತಿ ಮಾಡಿದ ಅನುಬಂಧ-1 (216 ಉಳಿದ ಮೂಲ ವೃಂದದ ಪ್ರಾಂಶುಪಾಲರ ಹುದ್ದೆಗಳಿಗೆ) ಮತ್ತು ಅನುಬಂಧ-2 (31 ಕಲ್ಯಾಣ ಕರ್ನಾಟಕ ಪ್ರಾಂಶಪಾಲರ ಹುದ್ದೆಗಳಿಗೆ)ನ್ನು ಸಿದ್ಧಪಡಿಸಿ, ಅಗತ್ಯ ಮಾಹಿತಿಯನ್ನು ಸಲ್ಲಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಇಪಿ 73 ಡಿಜಿಡಿ 2021 ದಿನಾಂಕ:21.06.2024ರಲ್ಲಿ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ರವರಿಗೆ ನಿರ್ದೇಶಿಸಲಾಗಿದೆ. ಸದರಿ ಮಾಹಿತಿಯನ್ನು ನಿರ್ದೇಶನಾಲಯದಿಂದ ಶೀಘ್ರವಾಗಿ ಪಡೆದು ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: ಇಪಿ 244 ಡಿಜಿಡಬ್ಲ್ಯೂ 2024**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು